ದೇವರ ರಾಜ್ಯದ

# ಶುಭವಾರ್ತೆ

ಕ್ರಿಸ್ಟಡೆಲ್ಫಿಯನ್ನರ ಸತ್ಯವೇದದ ಸತ್ಯಪ್ರಚಾರ ಪತ್ರಿಕೆ

49

# ಹೊಸ ವರ್ಷದ ಶುಭಾಶಯಗಳು

ಪ್ರತಿ ವರ್ಷವೂ ತಿಂಗಳ ಮೊದಲನೇ ದಿವಸದಲ್ಲಿ ಪ್ರಪಂಚದ ಬಹುತೇಕ ಜನರು ಜಾತಿ ಮತ ಭೇದವಿಲ್ಲದೆ ಜನಾಂಗಗಳ ಭೇದವಿಲ್ಲದೆ ಭಾಷೆಗಳ ಭೇದವಿಲ್ಲದೆ ಸಂಬಂಧಿಕರನ್ನು, ಗೆಳೆಯರನ್ನು, ಪರಿಚಯಸ್ಥರನ್ನು, ಒಬ್ಬರನ್ನೊಬ್ಬರು ಸಂಬಂಧಿಸಿದಾಗ "ಹೊಸ ವರ್ಷದ ಶುಭಾಶಯಗಳು" ಎಂದು ಹೇಳುವುದು ಇಲ್ಲವೇ ಶುಭಾಶಯದ ವರ್ಣರಂಜಿತ ಮುದ್ರಿತವಾದ ಕಾರ್ಡುಗಳನ್ನು ಅಂಚೆ ಮೂಲಕ ರವಾನಿಸುವುದನ್ನು ಇತ್ತೀಚಿನ ದಶಕಗಳಲ್ಲಿ ನಾವು ಕಾಣುತ್ತೇವೆ. ಇಂತಹ ಪರಸ್ಪರ ಶುಭಾಶಯಗಳನ್ನು ಒಬ್ಬರಿಗೊಬ್ಬರು ವಿನಿಮಯ ಮಾಡಿಕೊಳ್ಳುವ ಉದ್ದೇಶವೇನೆಂದರೆ ಕಳೆದ ವರ್ಷದಲ್ಲಿ ಸಂಭವಿಸಿದ ಹಾಗೂ ಅನುಭವಿಸಿದ ಕಷ್ಟಗಳು, ವಿಪತ್ತುಗಳು ಪ್ರಸಕ್ತ ವರ್ಷದಲ್ಲಿ ಬಾರದೇ, ಪ್ರತಿಯೊಬ್ಬರಿಗೂ ಹರ್ಷ, ಸಂತೋಷ, ಸುಖ, ಸಮಾಧಾನಗಳನ್ನು ತರುವಂತಾಗಲೀ ಎಂಬ ಹಾರೈಕೆಯೇ ಆಗಿರುತ್ತದೆ.

ನೀವು ಅಂತಹ ಸಂದರ್ಭಗಳಲ್ಲಿ ಒಬ್ಬರಿಗೊಬ್ಬರು ಶುಭ ಕೋರುವ ಮುನ್ನ ಸ್ವಲ್ಪ ನಿಧಾನಿಸಿ, ಆಲೋಚಿಸಿ! ಎಷ್ಟು ವರ್ಷಗಳಿಂದ ಈ ರೀತಿಯಾದ ಶುಭ ಹಾರೈಕೆಯನ್ನು ಕೋರುತ್ತಾ ಬಂದಿರುತ್ತೀರಿ; ನಿಮ್ಮ ಜೀವಿತದಲ್ಲಿನ ಪ್ರತಿ ಹೊಸ ವರುಷದಲ್ಲಿನ ಘಟನೆಗಳನ್ನು ನೆನಪಿಗೆ ತಂದುಕೊಳ್ಳಿ: ನಿಮ್ಮ ಪ್ರತಿ ವರುಷದ ಶುಭ ಹಾರೈಕೆಗೂ ಪ್ರತಿ ವರುಷದಲ್ಲಿ ನಡೆದ ಘಟನೆಗಳಿಗೂ ಹೋಲಿಸಿ, ಏನಾದರೂ ನಿಕಟ ಸಂಬಂಧವಿರುವುದು ಕಂಡುಬರುತ್ತದೆಯೇ?

ನೀವು ಹೇಳುವುದೇನು? ಹಾಗಾದರೆ ನಾವು ಒಬ್ಬರಿಗೊಬ್ಬರು ಶುಭ ಹಾರೈಸಬಾರದೋ? ಎಂದು ನೀವು ಕೇಳಬಹುದು. ಹಾಗೇನಿಲ್ಲ, ನೀವು ಶುಭ ಹಾರೈಸುವುದರಲ್ಲಿ ತಪ್ಪೇನಿಲ್ಲ. ಆದರೆ ಮಾನವನಿಗೆ ಈ ಲೋಕದಲ್ಲಿ ಯಾವಾಗ, ಹೇಗೆ ಶುಭವುಂಟಾಗುತ್ತದೆಂಬುದನ್ನು ಅರಿತು, ನಂತರ ಅದರಂತೆ ಶುಭ ಹಾರೈಸುವುದರಲ್ಲಿ ತಪ್ಪೇನಿಲ್ಲ. ಅಂಥರೆ ಶುಭ ಕೋರುವ ಸಂದರ್ಭವನ್ನು ತಿಳಿಯದೇ ಮಾಡುವುದು ತಪ್ಪಾಗುತ್ತದೆ. ಉದಾಹರಣೆಗೆ, ನಿಮ್ಮ ಸಂಬಂಧಿಕರಲ್ಲಿ ಒಬ್ಬರಿಗೋ ಇಲ್ಲವೇ ಸ್ನೇಹಿತರಲ್ಲಿ ಒಬ್ಬರಿಗೋ ಕುಟುಂಬದಲ್ಲಿ ಒಂದು ದುಃಖತರ ಸಂದರ್ಭ ಒದಗಿರುವಂತಹ ಸಂದರ್ಭದಲ್ಲಿ, ನೀವು ಹೋಗಿ ಶುಭಾಶಯಗಳನ್ನು ಹೇಳಿದರೆ, ಎಷ್ಟೊಂದು ಅರ್ಥಪೂರ್ಣವಾಗಿರುತ್ತದಲ್ಲವೇ? ಸ್ವಲ್ಪ ಆಲೋಚಿಸಿ.

ಪ್ರಪಂಚದ ಚರಿತ್ರೆಯನ್ನು ಸೂಕ್ಷ್ಮವಾಗಿ ಅವಲೋಕಿಸುವಾಗ ಶತಮಾನಗಳಿಂದಲೂ ಹೊಸ ವರುಷಗಳುರುಳುತ್ತಾ ಹೋಗಿವೆ. ಅದರಂತೆಯೇ ಹೊಸ ವರುಷದ ಶುಭಾಶಯಗಳೂ ಸಹ ಅವುಗಳ ಜೊತೆಯಲ್ಲಿಯೇ ಉರುಳಿ ಹೋಗಿವೆ. ಪ್ರಪಂಚದ ಇತಿಹಾಸದಲ್ಲಿ ಮರಣ ಹೊಂದಿದ ಘಟನೆಗಳನ್ನಾಗಲೀ ನಮ್ಮ ಆಯುಷಕಾಲದಲ್ಲಿ

ನಡೆದ/ನಡೆಯುತ್ತಿರುವ ಘಟನೆಗಳನ್ನಾಗಲೀ ಪಕ್ಷಿನೋಟದಲ್ಲಿ ಅವಲೋಕಿಸಿದಾಗ, ಕಂಡುಬರುವುದೇನು ? ಮಾನವನ ಹೃದಯಕ್ಕೆ ಉತ್ಸಾಹ, ನವಚೇತನ, ಹರ್ಷ, ಸಮಾಧಾನ, ಸುಖ ತರುವಂತಹುದೇ ? ಪ್ರತಿ ವರ್ಷದಲ್ಲಿಯೂ ಗತಿಸಿದ ವರ್ಷಕ್ಕಿಂತ ಹೆಚ್ಚು ದುಃಖ ತರುವ, ಕಷ್ಟ ತರುವ, ಅಶಾಂತಿ, ಅಸಮಾಧಾನ, ಹಿಂಸಾಚಾರಗಳ ನ್ನೊಳಗೊಂಡ ಘಟನೆಗಳನ್ನೇ ಕಾಣುತ್ತೇವೆ.

ಮಾನವ ಕುಲಕ್ಕೆ ನಿಜವಾಗಿಯೂ ಹರ್ಷ, ಸಮಾಧಾನ, ಸುಖ, ಶಾಂತಿ, ಸಮೃದ್ಧಿ ತರುವ ಹಾರೈಕೆಯೇ ಶುಭ ಹಾರೈಕೆಯಾಗುತ್ತದಲ್ಲವೇ ? ಹಾಗಾದರೆ, ಅದು ಯಾವಾಗ, ಹೇಗೆ, ಎಲ್ಲಿ ನನಸಾಗುತ್ತದೆ ಎಂಬುದನ್ನು ಅರಿಯಬೇಕಲ್ಲವೇ ?

ಹೊಸ ವರುಷದಲ್ಲಿ ನಮ್ಮ ಮುಂದಿರುವ ಕಾರ್ಯವನ್ನು ಅವಲೋಕಿಸುವುದು ಎಷ್ಟೊಂದು ಭಾವೋದ್ರೇಕವನ್ನುಂಟುಮಾಡುತ್ತದಲ್ಲವೇ ? ಪ್ರ ವಾ ದಿ ಯಾ ದ ಜೆಕರ್ಯನು "ಆ ದಿನ"ದ ಬಗ್ಗೆ ಹೀಗೆ ಹೇಳುತ್ತಾನೆ : "ಆ ದಿನದಲ್ಲಿ ಯೆಹೋವನು ಯೆರೂಸಲೇಮಿನವರನ್ನು ಸುತ್ತಲು ಕಾಪಾಡುವನು ; ಅವರೊಳಗೆ ಈಗಿನ ಕುಂಟನು ಆ ದಿನದಲ್ಲಿ ದಾವೀದನಂತಿರುವನು ;" (12:8).

ನಾನು ಹೇಳುತ್ತಿರುವ ಹೊಸ ವರ್ಷವು ಯಾವುದೆಂದರೆ ಕ್ರಿಸ್ತ ಯೇಸುವು ಪರಲೋಕದಿಂದ ಹಿಂದಿರುಗಿ ಬಂದಾಗ ಪ್ರಾರಂಭವಾಗುವ ಹೊಸ ವರ್ಷ. ಆ ವರ್ಷವು ಯೆಹೋವನ ಶಕ್ತಿಯಿಂದ ನಾವು ಮಹಿಮೆಗೊಳ್ಳುವ ನೂತನ ವರ್ಷವಾಗಿರುತ್ತದೆ. ಆ ನೂತನ ವರ್ಷದಲ್ಲಿ ಇನ್ನೆಂದಿಗೂ ಆಯಾಸಗೊಳ್ಳದ ಹಾಗೂ ಜೀವನದ ಬದಲಾಗುವ ಪರಿಸ್ಥಿತಿಗಳಿಂದ ತೊಂದರೆಗೀಡಾಗುವ ಹೃದಯಗಳಿರುವುದಿಲ್ಲ.

ಕಳೆದ ವರ್ಷದ(1991) ಪ್ರಾಪಂಚಿಕ ಘಟನೆಗಳನ್ನು ನಾವು ನೋಡಿದಾಗ, ಆ ಆಶೀರ್ವಾದವನ್ನು ಹೊಂದುವ ಕಾಲವು ಸನ್ನಿಹಿತವಾಗಿದೆಯೆಂದು ತಿಳಿಯಬಹುದಾಗಿದೆ. ದೇವರ ಉದ್ದೇಶವು ಜನಾಂಗಗಳ ಹಾಗೂ ಆತನ ವಿಶ್ವಾಸಿಗಳ ಮಧ್ಯೆ ಬಹಳ ಗಮನಾರ್ಹವಾಗಿ ವೃದ್ಧಿಸಿದೆ. ಇದರಲ್ಲಿ ಅನ್ಯ ಜನಾಂಗದವರನ್ನು ಮತ್ತು ಆತನ ಭಕ್ತರನ್ನು ಬರಲಿಕ್ಕಿರುವ ಆ ಮಹಾ ನ್ಯಾಯ ವಿಚಾರಣೆಗೆ ಸಿದ್ಧಪಡಿಸುತ್ತದೆ.

ದಾನಿಯೇಲ ಮತ್ತು ಜೆಕರ್ಯನ ಕಾಲದಲ್ಲಿದ್ದಂತೆ ಯೆಹೋವನ ದೂತರು ಯೆರೂಸಲೇಮನ್ನು ಪುನರ್ ಸ್ಥಾಪಿಸಲು ಸಿದ್ಧತೆ ಮಾಡುವಲ್ಲಿ ಚಟುವಟಿಕೆಯಿಂದ ತೊಡಗಿರುತ್ತಾರೆ. [ದಾನಿಯೇಲ 10:13; ಜೆಕರ್ಯ 6:5]

ದಾನಿಯೇಲನು ಹಾತೊರೆಯುತ್ತಿದ್ದ ಹಾಗೂ ಜಕರ್ಯನು ಅನುಭವಿಸಿದ ಆ ಸಂಗತಿಗಳು – ಅಂದರೆ ಬಾಬಿಲೋನಿನಿಂದ ರಕ್ಷಿಸಲ್ಪಟ್ಟು ಯೆರೂಸಲೇಮಿಗೆ ಹಿಂದಿರುಗಿ ಬಂದಾಗ ಇಸ್ರಾಯೇಲ್ಯರು ಪಡೆದ ಹೊಸ ಸ್ವಾತಂತ್ರ್ಯ.

**ವಾಗ್ದಾನದ ಒಂದು ದಿನ :**

ದಾನಿಯೇಲನ ಪ್ರವಾದನೆಗಳು ನೆರವೇರುವಾಗ ಹಾಗೂ ಆ ದಿನಗಳಲ್ಲಿ ಪೂರ್ವಿಕನು (Ancient of days ದಾನಿಯೇಲ 7:13) ನ್ಯಾಯ ವಿಚಾರಣೆಗೆ ಕುಳಿತಾಗ, ದಾನಿಯೇಲನು ಬಾಬಿಲೋನಿನ ವಿಶೇಷವಾದ ವಿಮೋಚನೆಯಲ್ಲಿ ಹರ್ಷಗೊಳ್ಳಲು ಜೀವವಿಂದೆದ್ದು ಬರುತ್ತಾನೆ. "ಯುಗದ ಸಮಾಪ್ತಿಯಲ್ಲಿ ಎದ್ದು ನಿನಗಾಗುವ ಸ್ವಾಸ್ತ್ಯದೊಳಗೆ ನಿಲ್ಲುವಿ" ಎಂದು ಅವನಿಗೆ ಹೇಳಲಾಗಿದೆ. (ದಾನಿಯೇಲ 12:13)

ಆ ಯುಗದ ಸಮಾಪ್ತಿಯು ಯೆಹೋವನ ನೂತನ ದಿನವನ್ನು ಪ್ರವೇಶಗೊಳಿಸುತ್ತದೆ. ದೇವಜನರ ವಿಮೋಚನೆಯನ್ನು ಎದುರು ನೋಡುತ್ತಿದ್ದ ಎಲ್ಲಾ ಯುಗಗಳ ವಿಶ್ವಾಸಿಗಳು ಆ ದಿನದಲ್ಲಿ ದಾನಿಯೇಲನೊಂದಿಗೆ ಇರುತ್ತಾರೆ. ನಮ್ಮ ಮುಂದಿರುವ ಪ್ರವಾದನೆಯಲ್ಲಿ ಜೆಕರ್ಯನು ಈ "ಹೊಸ ವರ್ಷ"ದ ಬಗ್ಗೆ ಹೇಳುತ್ತಾನೆ. ನಮ್ಮ ಕರೆಯುವಿಕೆಯನ್ನು ಹಾಗೂ ಆಯ್ಕೆಯನ್ನು ದೃಢಪಡಿಸಲು ನಾವು ಹೆಚ್ಚು ಕಾಲ ಶ್ರಮಿಸಬೇಕಾಗಿಲ್ಲವೆಂದು ಆ ಪ್ರವಾದನೆಯ (ಹೊಸ ವರ್ಷದ) ದರ್ಶನವು ನಮಗೆ ನೆನಪು ನೀಡುತ್ತದೆ.

ಯೆಹೋವನ ಉದ್ದೇಶವು ನಿಶ್ಚಿತ ಕಾಲಕ್ಕಿಂತ ಹೆಚ್ಚಾಗಿ ಒಂದು ಕ್ಷಣವೂ ಕಾಯುವುದಿಲ್ಲ. ಕ್ಲುಪ್ತ ಕಾಲಕ್ಕೆ ಸರಿಯಾಗಿ ನೆರವೇರುತ್ತದೆ. ಆದ್ದರಿಂದ ನಮ್ಮ ವೈಯಕ್ತಿಕ ಜೀವಿತದಲ್ಲಿ ನಾವು "ಆ ದಿನ"ಕ್ಕಾಗಿ ತುರ್ತು ಸಿದ್ಧತೆ ಮಾಡಲೇಬೇಕಾಗಿದೆ.

**"ಆ ದಿನ" ಪ್ರಾರಂಭವಾಗುವ ಸೂಚನೆಗಳು**

ಮುಂಚಿತವಾಗಿಯೇ ನಿರ್ಧರಿಸಲ್ಪಟ್ಟ ಕಾಲಕ್ಕೆ "ಆ ದಿನವು" ಪ್ರಾರಂಭವಾಗುತ್ತದೆ. ಕ್ಲುಪ್ತವೇಳೆಗೆ ಸರಿಯಾಗಿ ದಿಗಂತದಲ್ಲಿ ಬೆಳಕಿನ ಕಿರಣಗಳು ಹರಡುತ್ತವೆ. ಹಾಗೂ ಜೀವನವು ಮತ್ತೆ ಪ್ರಾರಂಭವಾಗುತ್ತದೆ. ಆಕಾಶದ ಪಥದಲ್ಲಿ ಸೂರ್ಯನು ಎಂದೂ ತಡಮಾಡಿಲ್ಲ. ನಾವು ಆ ಕಾಲ ಹಾಗೂ ಅದರ ಮುಂದುವರಿಕೆಯಲ್ಲಿ ಭರವಸವಿಡಬಹುದು.

"ಆ ದಿನದಲ್ಲಿ" ಎಂಬ ಪದವೃಂದವು ಜೆಕರ್ಯನ ಕಡೇ ಅಧ್ಯಾಯಗಳಲ್ಲಿ ಪದೇ ಪದೇ ಬಂದಿರುವುದು ಮಹತ್ವವುಳ್ಳದ್ದಾಗಿದೆ. (ಅಧ್ಯಾಯ 12:3,4,6,8,9,11; 13:1,2,4; 14:1,6,8,13,20,21).

1991 ನೇ ವರ್ಷವು "ಆ ದಿನ"ದ ಸಿದ್ಧತೆಗಾಗಿ ಜನಾಂಗಗಳ ಮಧ್ಯೆ ಅನೇಕ ಆಂದೋಲನಗಳನ್ನು ನೋಡಿತು. ದಾನಿಯೇಲ ಮತ್ತು ಜೆಕರ್ಯನ ಕಾಲಗಳಲ್ಲಿದ್ದಂತೆ ಈಗಲೂ ದೇವದೂತರು ಕಾರ್ಯ ಚಟುವಟಿಕೆಯಲ್ಲಿದ್ದಾರೆ. ಬರಲಿಕ್ಕಿರುವ

“ಆ ದಿನ”ದ ಪ್ರಾರಂಭಕ್ಕೆ ಪ್ರಪಂಚವನ್ನು ಸಿದ್ಧಪಡಿಸುವಲ್ಲಿ ಎರಡು ಮೂಲಾಂಶಗಳು ರಾಷ್ಟ್ರೀಯ ವ್ಯವಹಾರದಲ್ಲಿ ಪ್ರಮುಖವಾಗಿವೆ – 1) 1790ರ ಫ್ರೆಂಚ್ ಕ್ರಾಂತಿ ಮತ್ತು 2) ಒಂದು ಶತಮಾನದ ನಂತರ, ಯೆಹೂದ್ಯರ ಪುನರುಜ್ಜೀವನ.

ಫ್ರೆಂಚ್ ಕ್ರಾಂತಿಯು ಕಪ್ಪೆಯಂತಹ ಆತ್ಮಗಳನ್ನು ವೃದ್ಧಿಗೊಳಿಸಿತು. ಅವು ಹಿಂದಿನ ಮಟ್ಟವನ್ನು ಹಾಳುಮಾಡಿ, ವೈಯಕ್ತಿಕ ಹಕ್ಕು ಹಾಗೂ ಸ್ವಾತಂತ್ರ್ಯವನ್ನು ಉತ್ತೇಜಿಸಿತು. ಅಲ್ಲದೆ ಸರ್ವಶಕ್ತನಾದ ದೇವರಿಗೆ ತೋರಿಸುತ್ತಿದ್ದ ಮತೀಯ ನಿಷ್ಠೆಯನ್ನು ಮುಂದುಹಾಕಿತು. ಈ ಮೂಲಾಂಶವು ಇಂದಿನ ಐಹಿಕ ಭೋಗಗಳ ಸಮಾಜವನ್ನು ಸೃಷ್ಟಿಸಿದ್ದಲ್ಲದೆ ಅಂತರರಾಷ್ಟ್ರೀಯ ಶಾಂತಿಯನ್ನು ಭಂಗಪಡಿಸಿತು.

ಎರಡನೇ ಘಟನೆಯು ಯೆಹೂದ್ಯರ ಪುನರುಜ್ಜೀವನವಾಗಿದ್ದು, ಮಧ್ಯ ಪ್ರಾಚ್ಯವನ್ನು (Middle East) ಪ್ರಾಮುಖ್ಯಕ್ಕೆ ತಂದಿದ್ದಲ್ಲದೆ, ಎಲ್ಲಾ ಜನಾಂಗಗಳ ಗಮನವನ್ನು ಯೆರೂಸಲೇಮಿಗೆ ಸೆಳೆಯಿತು. ಕಪ್ಪೆಯಂತಹ ಆತ್ಮವು (Frog Spirit) ಶಾರೀರಿಕ ಉದ್ದೇಶಗಳ ಹಾಗೂ ಭಾವಗಳಲ್ಲಿ ವ್ಯಾಪಾರ ನಡೆಸುವ ಒಂದು ಮತೀಯ ಪ್ರಭಾವವಾಗಿದೆ. ವೃತ್ತ ಪತ್ರಿಕೆಗಳನ್ನು ಗ್ರಹಿಸಿಕೊಂಡು ಓದುವುದು ತುಂಬಾ ಪ್ರಚೋದಕವಾಗಿರುತ್ತದೆ.

**ನೀತಿಯನ್ನು ನೋಡುವ ಒಂದು ದಿನ :**

ಯೆಹೋವನ ದಿನದಲ್ಲಿ ಶಕ್ತಿಯುತವಾದ ನ್ಯಾಯತೀರ್ಪು ಪ್ರಪಂಚವನ್ನೂ ಅದರ ಬುಡವನ್ನೂ ಅಲುಗಾಡಿಸುತ್ತದೆ. ಬಹಳ ಕಾಲದಿಂದಲೂ ಉದಾಸೀನ ಮಾಡಿದ್ದ, ಪರಲೋಕದ(ದೇವರ) ಶಕ್ತಿಯನ್ನು ಜನರು ಗೌರವಿಸುವಂತೆ ಮಾಡುತ್ತದೆ.

**ಜೆಕರ್ಯ 12 ರಲ್ಲಿ ಯೆಹೋವನು ಮತ್ತೆ ಹೇಳುತ್ತಾನೆ :–**

“ಆ ದಿನದಲ್ಲಿ ನಾನು.......ಮಾಡುವೆನು. ತನ್ನ ಉದ್ದೇಶವನ್ನು ನೆರವೇರಿಸಲು ಯೆಹೋವನು ಕಾರ್ಯ ನಡೆಸುವುದನ್ನು ನಾವು ಜಾಗರೂಕತೆಯಿಂದ ನೋಡುತ್ತಿರುವಲ್ಲಿ, ನಾವೂ ಸಹ “ಮಾಡೋಣ”. – ನಾವೂ ಸಹ ಆತನೊಂದಿಗೆ ಕೆಲಸ ಮಾಡೋಣ. ನಮ್ಮ ಪರೀಕ್ಷೆಯ ಕಾಲದಲ್ಲಿ ನಮ್ಮ ಕಡೆಗೆ ಅವಮಾನವನ್ನು ಎಸೆದ ಜನರ ವಿರುದ್ಧ ಸಂಪೂರ್ಣ ಪ್ರತೀಕಾರ ಇರುತ್ತದೆ. ಎಲ್ಲಾ ಕಡೆಗಳಿಂದಲೂ ಕೆಟ್ಟ ಕಾರ್ಯಗಳನ್ನು ಹಾಗೂ ಪಾಪಕೃತ್ಯಗಳನ್ನು ಉತ್ತೇಜಿಸುವ ಈ ಮರ್ತ್ಯ ಜೀವಿತ ಕಾಲದ ವಿರುದ್ಧ ನ್ಯಾಯತೀರ್ಪು ಇರುತ್ತದೆ.

**ಉದಯವು ಬರುತ್ತದೆ.**

ಯೆಹೋವನ ಈ ದಿನವು ಬರುತ್ತದೆಂದು ನಾವು ಸಂದೇಹಪಡುತ್ತೇವೋ ? ಜೆಕರ್ಯನು ಯೆಹೋವನು ಸ್ಥಾಪಿಸಿದ ಮೂರುಪಟ್ಟು ಸಾಕ್ಷಿಯನ್ನು ನಮ್ಮ

ಜ್ಞಾಪಕಕ್ಕೆ ತರುತ್ತಾನೆ. "ಇಸ್ರಾಯೇಲಿನ ವಿಷಯವಾಗಿ ಯೆಹೋವನು ನುಡಿದ ದೈವೋಕ್ತಿ. ಆಕಾಶ ಮಂಡಲವನ್ನು ಹರವಿ ಭೂಲೋಕಕ್ಕೆ ಅಸ್ತಿವಾರವನ್ನು ಹಾಕಿ ಮನುಷ್ಯನೊಳಗೆ ಜೀವಾತ್ಮವನ್ನು ಸ್ಥಾಪಿಸುವ ಯೆಹೋವನು ಇಂತೆನ್ನುತ್ತಾನೆ." (12:1).

ಪ್ರತಿದಿನವೂ ಮೂರು ಸೃಷ್ಟಿಕಾರ್ಯಗಳ ಪುನರಾವೃತ್ತಿಯಾಗುತ್ತದೆ. ಮಧ್ಯರಾತ್ರಿಯ ಗಂಟೆಗಳು ಕರಗುತ್ತಿದ್ದಂತೆಯೇ ಉದಯವು ಇನ್ನೇನು ಪ್ರಾರಂಭವಾಗುವ ಸಮಯದಲ್ಲಿ ಬೆಳಕಿನ ಕಿರಣಗಳು "ಹರಡುತ್ತವೆ". ದಿಗಂತದಲ್ಲಿ ಅವು ಕಾಣಿಸಿಕೊಂಡು, ಬಲಗೊಂಡು, ಲೋಕವನ್ನೆಲ್ಲಾ ಬೆಳಕಿನಲ್ಲಿ ತುಂಬಲು ಪ್ರಕಾಶಮಾನಗೊಳ್ಳುತ್ತವೆ. ಭೂಲೋಕದ ಅಸ್ತಿವಾರವು ಕಾಣಿಸಿಕೊಳ್ಳುತ್ತದೆ. ಆಗ ಮಾನವನು ಮತ್ತೊಂದು ದಿನಕ್ಕಾಗಿ ಶ್ರಮಿಸಲು ವಿಶ್ರಾಂತಿಯ ಹಾಸುಗೆಯಿಂದ ಏಳುತ್ತಾನೆ. ದೇವದೂತರ ಬಹು ಹಿಂದಿನ ಈ ಬಲಿಷ್ಠ ಸೃಷ್ಟಿ ಕಾರ್ಯವು ದೈನಂದಿನ ದೃಷ್ಟಾಂತದಲ್ಲಿ ಪುನರಾವೃತ್ತಿಯಾಗುತ್ತದೆ.

ಪ್ರತಿ ದಿನವನ್ನೂ ದೃಷ್ಟಿಸುವ ಆತನು ಹೀಗೆ ಹೇಳುತ್ತಾನೆ: "ಯೆರುಸಲೇಮನ್ನು ಅಮಲೇರಿಸಿ ಓಲಾಡುವ ಬೋಗುಣಿಯನ್ನಾಗಿ ಮಾಡುವೆನು". (12:2). ದಾವೀದ ನಗರವು ತೊಂದರೆ ಹಾಗೂ ಸಂಕಷ್ಟಗಳಿಂದ ದೂರವಾಗಿದ್ದುದು ಅತಿ ವಿರಳ. ದಾವೀದನ ಜಯಗಳು, ಸೊಲೋಮೋನನ ವೈಭವ, ರೆಹೋಬ್ಬಾಮನ ಮೂರ್ಖತನ, ಚಿದ್ಕೀಯನ ವ್ಯಥೆ – ಇವೆಲ್ಲವೂ ಯೆರೂಸಲೇಮಿನ ಚರಿತ್ರೆಯ ಭಾಗವಾಗಿದೆ.

ಅದು ಮೆಸ್ಸೀಯನ ನಿರಾಕರಣೆಯ ಅಪಕೀರ್ತಿಯನ್ನು ನೋಡಿತು. ನಾಲ್ವತ್ತು ವರ್ಷಗಳ ನಂತರ, ದೈವ ಕೋಪವು ರೋಮನ್ ಸೈನ್ಯವನ್ನು ಯೆರೂಸಲೇಮಿನ ವಿರುದ್ಧ ಬಿಟ್ಟಿತು. ಸುಮಾರು ಎರಡು ಸಾವಿರ ವರ್ಷಗಳ ತನಕ ಆ ನಗರವು ಧೂಳಿನಲ್ಲಿತ್ತು. ಅನ್ಯ ಜನಾಂಗದವರು ಆ ನಗರದ ಬೀದಿಗಳನ್ನು ತುಳಿದಾಡಲು ದಾವೀದ ನಗರದ ಮೇಲೆ ರಾತ್ರಿಯ ಕತ್ತಲೆಯು ಕವಿಯಿತು.

ದೇವರ ಏಕೈಕ ಪುತ್ರನ ಅವಮಾನವನ್ನು ವೀಕ್ಷಿಸಿದ ಆ ನಗರವೇ ಅವನ ಪ್ರತೀಕಾರದ ರಂಗವಾಗಿರುತ್ತದೆ. ಭೂಲೋಕದ ಮೇಲಿರುವ ಯಾವ ಮಾನವನೂ ಅವನ್ನು ತಡೆಯಲು ಸಾಧ್ಯವಿಲ್ಲ.

## ನೂತನ ದಿನದಲ್ಲಿ ಚಟುವಟಿಕೆ

ನೂತನ ದಿನದಲ್ಲಿ ಯೆಹೋವನು ಮಹಿಮೆಯಿಂದಲೂ ಬಲದಿಂದಲೂ ಎದ್ದೇಳುತ್ತಾನೆ. "ಆಗ ಯೆಹೂದದ ಕುಲಪತಿಗಳು ಮನಸ್ಸಿನೊಳಗೆ – ಯೆರೂಸಲೇಮಿನವರು ತಮ್ಮ ದೇವರೂ ಸೇನಾಧೀಶ್ವರನೂ ಆದ ಯೆಹೋವನಲ್ಲಿ ಬಲಗೊಂಡು ನಮಗೆ ತ್ರಾಣವಾಗಿದ್ದಾರೆ ಅಂದುಕೊಳ್ಳುವರು"(12:5). "ಆ ದಿನದಲ್ಲಿ

ನಾನು......." ವ (6). ಮತ್ತೊಂದು ಗಂಟೆ ಕಳೆಯಿತೆಂಬುದನ್ನು ಸೂಚಿಸುತ್ತದೆ-ದಿನವು ಮುಂದುವರೆದಂತೆಲ್ಲಾ, ಒಂದು ಹೊಸ ದೃಶ್ಯವನ್ನು ಪ್ರವೇಶಿಸಲಾಗುತ್ತದೆ.

ನವೀಕರಣಗೊಂಡ ಇಸ್ರಾಯೇಲ್ಯರು ತಮ್ಮ ಪಿತೃಗಳಿಗೆ ಮಾಡಿದ ವಾಗ್ದಾನವನ್ನು ಅರಿತವರಾಗಿ, ಮೆಸ್ಸೀಯನ ಹಿಂದೆ ತಿರುಗುತ್ತಾರೆ. ಅವರು ಸತ್ಯ ಹಾಗೂ ನೀತಿಯನ್ನು ಹಿಂಬಾಲಿಸುತ್ತಾರೆ. ಯೆಹೂದವು ತಮ್ಮ ದೇಶದಲ್ಲಿ ನೆಲಸುವರು ; ಕುಲಗಳು ಮತ್ತೆ ಒಂದುಗೂಡುವುವು ; ಕುಟುಂಬಗಳು ಯೆರೂಸಲೇಮಿನ "ಶಾಂತಿ" ಯನ್ನು ಅನುಭವಿಸುವರು.

ಮತ್ತೆ ಕಾಲವು ಕಳೆಯುತ್ತದೆ – ಯೆಹೋವನ ದಿನದ ಅದ್ಭುತಗಳನ್ನು ಮುಂದಿನ ದೃಶ್ಯವು ಪ್ರಕಟ ಮಾಡುತ್ತದೆ. "ಆ ದಿನದಲ್ಲಿ" ಯೆಹೋವನು ಯೆರೂಸಲೇಮಿನವರನ್ನು ಸುತ್ತಲು ಕಾಪಾಡುವನು ; ಅವರೊಳಗೆ ಈಗಿನ ಕುಂಟನು ಆ ದಿನದಲ್ಲಿ ದಾವೀದನಂತಿರುವನು ; ಧಾವೀದ ವಂಶವು ದೇವರಂತೆ, ಯೆಹೋವನ ದೂತನ ಹಾಗೆ ಅವರಿಗೆ ಮುಂದಾಳಾಗುವದು" (ವ. 8). ಇಸ್ರಾಯೇಲಿನ ಕುಲಗಳಲ್ಲಿ ವಿಜಯವನ್ನು ನೋಡುತ್ತೇವೆ ದಾವೀದನಿಗೂ ಗೊಲ್ಯಾತನಿಗೂ ನಡೆದ ಪ್ರಾಚೀನ ಹೋರಾಟವು ಮತ್ತೊಮ್ಮೆ ಅಂತಿಮವಾಗಿ ಅಡಲ್ಪಡುವದು. ದಾವೀದನ ಕಾಲದಿಂದ ಇಂದಿನವರೆಗೆ ಆ ಹೋರಾಟವು ಆಗಿಂದ್ದಾಗ್ಯೆ ನಡೆಯುತ್ತಲೇ ಬಂದಿದೆ). ಹಿಂದೆ ಬೆಕ್ಲೆಹೇಮಿನ ಕುರಿಕಾಯುವ ಬಾಲಕನೊಂದಿಗೆ ಇದ್ದಂತೆ, ಮುಂದೆ ಯೆಹೋವನು ದಾವೀದನ ಸಂತತಿಯೊಂದಿಗೆ ಇರುವುದನ್ನು ನೋಡಬಹುದು. ತನ್ನ ಜನರ ರಕ್ಷಕನಾಗಿ ಅತನು ಕಾಣಿಸುತ್ತಾನೆ. ಅವರು ದಾವೀದನಂತೆ ಬಲಪಡಿಸಲ್ಪಡುತ್ತಾರೆ – ಯಾಕೋಬನ ತೊಡೆಯನ್ನು ಮುಟ್ಟಿ ಅವನು ಬಲಹೀನನಾದಂತೆ, ಇನ್ನು ಮುಂದೆ ಆಗುವುದಿಲ್ಲ.

**ಶೋಕದ ದಿನ :**

ಯೆಹೋವನ ದಿನವು ಮುಂದುವರೆದು ವ. 10 ರಲ್ಲಿ ಮತ್ತೊಂದು ದೃಶ್ಯವನ್ನು ಪ್ರಕಟಿಸುತ್ತದೆ. "ದಾವೀದನ ವಂಶದವರಲ್ಲಿಯೂ ಯೆರೂಸಲೇಮಿನವರಲ್ಲಿಯೂ ದೇವರ ದಯೆಯನ್ನು ಹಂಬಲಿಸಿ ಬೇಡುವ ಭಾವವನ್ನು ಸುರಿಸುವೆನು. ತಾವು ಇರಿದವನನ್ನು ದಿಟ್ಟಿಸಿ ನೋಡುವರು ; ಇದ್ದೊಬ್ಬ ಮಗನನ್ನು ಕಳೆದುಕೊಂಡಂತೆ ಅವನಿಗಾಗಿ ಗೋಳಾಡುವರು. ಚೊಚ್ಚಲ ಮಗನ ವಿಯೋಗಕ್ಕೋಸ್ಕರ ದುಃಖಪಟ್ಟಂತೆ ಅವನಿಗಾಗಿ ಗೋಳಾಡುವರು". ಯೆಹೂದ್ಯ ಜನಾಂಗದವರು ತಮ್ಮ ಹಿಂದಿನ ಮಾರ್ಗಗಳನ್ನು ಪ್ರತಿಬಿಂಬಿಸುವಾಗ, ಅವರು ತಗ್ಗಿಸಲ್ಪಟ್ಟು ತಮ್ಮ ರಕ್ಷಕನನ್ನೂ (ಮೆಸ್ಸೀಯ) ಆತನ ಭಕ್ತರನ್ನೂ ನೋಡುತ್ತಾರೆ. ಭಕ್ತಿಹೀನ ಅನ್ಯ ಜನಾಂಗದವರು ತೆಗೆಯಲ್ಪಡುವರು. ಯೋಸೇಫನು ನಿತ್ಯ ಜೀವ ಪಡೆದವರೊಂದಿಗೆ ಅಲ್ಲಿರುತ್ತಾನೆ, ಯೋಸೇಫನು ತನ್ನ ಸಹೋದರರಿಗೆ ತನ್ನನ್ನು ಪ್ರಕಟಿಸಿಕೊಂಡಾಗ ಅವರಿಗೆ ದುಃಖ, ಸಂತೋಷ, ಭಾವೋದ್ರೇಕ ಹಾಗೂ ಆಶ್ಚರ್ಯ ಉಂಟಾಗಿ, ಅವನು ತಮ್ಮ ರಕ್ಷಕನಾಗುತ್ತಾನೆಂದು ಅವರು ಎಂದಿಗೆ ನೆನಸಿರಲಿಲ್ಲ. ಆದರೆ ಇಲ್ಲಿ ಈ ಯೋಸೇಫನು

(ಕ್ರಿಸ್ತನು) ದೇವರ ರಾಜ್ಯದಲ್ಲಿ ಮುಖ್ಯಸ್ಥನಾಗಿ ಎಲ್ಲಾ ವ್ಯವಹಾರಗಳನ್ನು ನಿಯಂತ್ರಿಸುವವನಾಗಿರುತ್ತಾನೆ. 1900 ವರ್ಷಗಳ ಹಿಂದೆ ಯೆಹೂದ್ಯರು ಮಾಡಿದ ಕಾರ್ಯ – ತಾವು ಆರೋಪ ಹೊರಿಸಿ, ಶಿಲುಬೆಗೇರಿಸಿದ್ದು ಯೆಹೋವನನ್ನು (ಆತನನ್ನು ಪ್ರಕಟಿಸಿದ ಯೇಸುವನ್ನು) ಎಂದು ಅವರು ಆಗ ಅರಿಯುತ್ತಾರೆ.

ಆದರೆ ದುಃಖಪಡದೇ ಇರುವಂಥವರು ಕೆಲವರು ಅಲ್ಲಿ ಇರುತ್ತಾರೆ. ಅವರು ಯೆಹೋವನ ಆ ದಿನದ ಕಹಿ ಹಾಗೂ ತಗ್ಗಿಸುವಿಕೆಯಿಂದ ಪ್ರತ್ಯೇಕವಾಗಿರುತ್ತಾರೆ. ಅವರು ಶೋಕಿಸುವುದಿಲ್ಲ, ಯಾಕೆಂದರೆ ಅವರ ಶೋಕವು ಈಗ ಸಂತೋಷಕ್ಕೆ ಮಾರ್ಪಡುತ್ತದೆ. ಆ ಗುಂಪೇ ಕ್ರಿಸ್ತನ ಹಿಂಬಾಲಕರಾಗಿರುತ್ತಾರೆ ಆ ದಿವಸವು ಅವರಿಗೆ ಮಹಿಮೆಯ, ವಿಜಯದ ಹಾಗೂ ನ್ಯಾಯ ತೀರ್ಪಿನ ದಿವಸವಾಗಿರುತ್ತದೆ. ಆದರೆ ಇಂದು ಅವರು ಕರ್ತನ ಮೇಜಿನ ಸುತ್ತ ಶೋಕಿಸುತ್ತಾರೆ. ಇಂದು ಅವರು ತಿವಿಯಲ್ಪಟ್ಟು, ಕ್ರೂಜೆಗೆ ಹಾಕಲ್ಪಟ್ಟು, ಲೌಕಿಕ ಅಧಿಕಾರಿಗಳಿಂದ, ಸಮಾಜದಿಂದ ನಿರಾಕರಿಸಲ್ಪಟ್ಟು ಕರ್ತನೊಂದಿಗೆ ಸೇರಿರುತ್ತಾರೆ. ಪೌಲನು ತಿಮೋಥೆಯನಿಗೆ ಬರೆಯುವಾಗ ಇಂತಹವರ ಬಗ್ಗೆ ಹೀಗೆ ಹೇಳುತ್ತಾನೆ: "ನಾವು ಆತನೊಡನೆ....... ಸಹಿಸಿಕೊಳ್ಳುವವರಾಗಿದ್ದರೆ ಆತನೊಡನೆ ಆಳುವೆವು" (2 ತಿಮೋಥೆ 2:12).

ಆದ್ದರಿಂದ ಯೆಹೋವನ ಆ ದಿನಕ್ಕಾಗಿ ನಮ್ಮನ್ನು ನಾವು ಸಿದ್ಧಪಡಿಸಿಕೊಳ್ಳಬೇಕಾಗಿದೆ ನಮಗಿರುವ ಅವಕಾಶಗಳನ್ನು ನಾವು ಅರಿತು, ಸಿದ್ಧಪಡಿಸಿಕೊಳ್ಳುವುದು ಅಗತ್ಯವಾಗಿದೆ

ನಮ್ಮ ಮಾರ್ಗಗಳನ್ನು ನಾವು ಒಮ್ಮೆ ನೋಡಿಕೊಂಡವರಾಗಿ, ನಮ್ಮ ಜೀವಿತದಲ್ಲಿ ನಾವು ಯೆಹೋವನ ಆಜ್ಞೆಗಳನ್ನು ನಮ್ಮ ಪಾಪದ ಮೂಲಕ ತಿವಿದಿದ್ದೇವೆಯೇ ಎಂದು ಪರೀಕ್ಷಿಸಿಕೊಳ್ಳಬೇಕಾಗಿದೆ.

ಜೆಕರ್ಯನ ಈ ಅಧ್ಯಾಯದ ಅಂತ್ಯದಲ್ಲಿ ಯಾವ ಮಾನವನೂ ತನ್ನ ಸಹೋದರನನ್ನು ರಕ್ಷಿಸಲಾರನು; ಆದ್ದರಿಂದ ನಮ್ಮ ಕರ್ತನ ಮುಂದೆ ನಾವು ಹೇಗಿದ್ದೇವೆ ಎಂಬುದನ್ನು ವೈಯಕ್ತಿಕವಾಗಿ ಪರೀಕ್ಷಿಸಿಕೊಳ್ಳಬೇಕೆಂದು ಎಚ್ಚರಿಸುತ್ತಾನೆ ನಮ್ಮ ಆತ್ಮ ಸಾಕ್ಷಿಗೆ ನಾವು ಪ್ರತಿಯೊಬ್ಬರೂ ಉತ್ತರ ನೀಡಬೇಕಾಗಿರುತ್ತದೆ ಮತ್ತು ದೇವರಲ್ಲಿ ವೈಯಕ್ತಿಕ ಸಮಾಧಾನವನ್ನು ಬೇಡಬೇಕಾಗಿರುತ್ತದೆ.

ಯೆಹೋವನ ದಿನವು ಬಹಳ ಸಮೀಪವಾಗಿದೆ. ಕ್ರಿಸ್ತನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಿರುವ ನಾವು ಒಟ್ಟಾಗಿ ಸೇರಿದ್ದಾಗ ಇದನ್ನು ಜ್ಞಾಪಕ ಮಾಡಿಕೊಳ್ಳುತ್ತೇವೆ. ಯೆಹೋವನ ದಿನವು ನಮ್ಮ ಮೇಲೆ ಇದೆ. ಅದು ಭೂನಿವಾಸಿಗಳೆಲ್ಲರ ಮೇಲೆ "ಆತನ ದಿನ"ವಾಗಿರುತ್ತದೆ.

'ಆತನ ದಿನ'ವನ್ನು 'ನಮ್ಮ ದಿನ'ವನ್ನಾಗಿ ಮಾಡಿಕೊಳ್ಳಬಹುದು. ಈ ದಿನವನ್ನು ಕರ್ತನ ಮೇಜು ನಮ್ಮ ಜ್ಞಾಪಕದ ಮೇಜು. ನಮ್ಮ ಪಾಪಗಳ ಮೂಲಕ ಯಾರನ್ನು ಇರಿದೆವೋ ಆತನನ್ನು ನಾವು ನೋಡುತ್ತೇವೆ.

ಆ ದಿನವು ಯಾವಾಗ ಬರುವುದೆಂದು ಯಾರೂ ಅರಿಯರು. "ಕರ್ತನು ದಿನವು ನಿಮಗೆ ಗೊತ್ತಿಲ್ಲವಾದ್ದರಿಂದ, ಎಚ್ಚರವಾಗಿರಿ"(ಮತ್ತಾಯ 24:42).

—ಭಾ. ಚಂದುದಾಸ್

# ಯೇಸುಕ್ರಿಸ್ತನು ಯಾರು? -3

## ಯೇಸುವಿನ ಜನನ :

ಕರ್ತನಾದ ಯೇಸುಕ್ರಿಸ್ತನ ಜನನವು ಒಂದು ಮಹಾ ಅದ್ಭುತದ ಫಲವಾಗಿದೆ. ಆತನ ತಾಯಿಯು ಸದ್ಗುಣಳಾದ ಒಬ್ಬ ಯೌವನಸ್ಥ ಅವಿವಾಹಿತ ಸ್ತ್ರೀಯಾಗಿದ್ದಳು. ಅವಳು ಒಬ್ಬ ಕನ್ನಿಕೆಯಾಗಿದ್ದಳು. ಇದು ಹೀಗೆ ಸಂಭವಿಸಿತು.

"ಆ ದೂತನು ಆಕೆಗೆ – ಮರಿಯಳೇ ಹೆದರಬೇಡ ; ನಿನಗೆ ದೇವರ ದಯೆ ದೊರಕಿತು. ಇಗೋ, ನೀನು ಗರ್ಭಿಣಿಯಾಗಿ ಒಬ್ಬ ಮಗನನ್ನು ಹೆರುವಿ ; ಆತನಿಗೆ ಯೇಸುವೆಂದು ಹೆಸರಿಡಬೇಕು........ಮರಿಯಳು ಆ ದೂತನನ್ನು – ಇದು ಹೇಗಾದೀತು? ನಾನು ಪುರುಷನನ್ನು ಅರಿತವಳಲ್ಲವಲ್ಲಾ ಎಂದು ಕೇಳಿದ್ದಕ್ಕೆ ದೂತನು – ನಿನ್ನ ಮೇಲೆ ಪವಿತ್ರಾತ್ಮ ಬರುವದು ; ಪರಾತ್ಪರನ ಶಕ್ತಿಯು ನೆರಳು ನಿನ್ನ ಮೇಲೆ ಬೀಳುವದು ; ಆದದ್ದರಿಂದ ಹುಟ್ಟುವ ಆ ಪವಿತ್ರ ಶಿಶು ದೇವರ ಮಗನೆನಿಸಿಕೊಳ್ಳುವದು". (ಲೂಕ 1:30-35).

ಈ ವಾಕ್ಯಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿರಿ. ಅವುಗಳಿಂದ ಬಹಳಷ್ಟು ಕಲಿಯಬಹುದಾಗಿದೆ. ಆ ಮಗು ಮರಿಯಳ ಸ್ವಂತ ಮಗನಾಗೆ ಬೇಕಿರುತ್ತೆ. ಆ ದೂತನು "ಮರಿಯಳೇ, ಒಬ್ಬ ದೈವೀಕ ಪುರುಷನು ಬಂದು, ನಿನ್ನಲ್ಲಿ ಜೀವಿಸಲು, ಮಾಂಸದ ಒಂದು ಶರೀರವನ್ನು ನೀನು ತಯಾರುಮಾಡುವಿ" ಎಂದು ಹೇಳಲಿಲ್ಲ. ಆತನು ಹೇಳಿದ್ದು, "ನೀನು ಗರ್ಭಿಣಿಯಾಗಿ ಒಬ್ಬ ಮಗನನ್ನು ಹೆರುವಿ". ಈ ಪದಗಳು ಸ್ಪಷ್ಟವಾಗಿದ್ದು, ಅಕ್ಷರಶಃ ಅರ್ಥಮಾಡಿಕೊಳ್ಳಬೇಕೆಂದೇ ಉದ್ದೇಶಿತವಾಗಿವೆ. ಅವು ಒಂದು ನೂತನ ಮಾನವ ಜೀವದ ಪ್ರಾರಂಭವನ್ನು ವಿವರಿಸುತ್ತದೆ – ಒಬ್ಬ ದೈವೀಕ ಪುರುಷನು ಭೂಲೋಕಕ್ಕೆ ಬರುವುದನ್ನು ತಿಳಿಸುವುದಿಲ್ಲ.

ಯೇಸುವು ಒಬ್ಬ ದೈವೀಕ ಪುರುಷನಾಗಿದ್ದು, ಮರಿಯಳಿಗಿಂತ ಲಕ್ಷಾಂತರ ವರ್ಷಗಳಷ್ಟು ವಯಸ್ಸಾಗಿದ್ದಲ್ಲಿ, ಯಾವುದೇ ಅರ್ಥದಲ್ಲಿಯಾದರೂ ಆತನು ಆಕೆಯ ಮಗನಾಗಲು ಹೇಗೆ ಸಾಧ್ಯ? ಆದರೂ ಸಹ ಆತನು ಅವಳ ಮಗನಾಗಿದ್ದನು. ಕೇವಲ ಒಬ್ಬ ಅಸಾಧಾರಣ ಸಾಕುಮಗನಾಗಿರಲಿಲ್ಲ. ಸುವಾರ್ತೆಗಳೆಲ್ಲೆಲ್ಲಾ ಆಕೆಯನ್ನು ಆತನ ತಾಯಿಯೆಂದು ಕರೆದಿದೆಯೇ ಹೊರತು, ಎಂದಿಗೂ ಆತನ ಸಾಕು ತಾಯಿಯೆಂದು ಕರೆದಿಲ್ಲ.

ಯೇಸುವಿನ ತಾಯಿಯನ್ನು ನಂತರ ಮದುವೆಯಾದ ಯೋಸೇಫನನ್ನು ಆತನ ತಂದೆಯೆಂದು ಕೆಲವು ವೇಳೆ ಕರೆದಿದ್ದರೂ, ವಾಸ್ತವಿಕ ಸಂಗತಿಗಳ ಬಗ್ಗೆ, ನಮ್ಮನ್ನು ಸಂದೇಹಕ್ಕೀಡುಮಾಡಿಲ್ಲ. ಲೂಕನು, ಯೇಸುವನ್ನು "ಜನರ ಎಣಿಕೆಯಲ್ಲಿ ಯೋಸೇಫನ ಮಗನು" (the Son, was supposed of Joseph) ಎಂದು ಉಲ್ಲೇಖಿಸಿದ್ದಾನೆ. (ಲೂಕ 3:23). ಆದ್ದರಿಂದ ಯೇಸುವು ನಿಜವಾಗಿಯೂ ಮರಿಯಳ ಮಗನಾಗಿದ್ದನು. ಮರಿಯಳ ಮಗನೆಂದು ನಟನೆ ಮಾಡುತ್ತಿದ್ದ ಒಬ್ಬ ದೈವೀಕ ಪುರುಷನಾಗಿರಲಿಲ್ಲ. ಮಕ್ಕಳು ಮಾಡುವ ಹಾಗೆ, ಅನೇಕ ರೀತಿಯಲ್ಲಿ ಆತನು ತನ್ನ ತಾಯಿಯನ್ನು ಹೋಲುತ್ತಿದ್ದನು. ಅದೇ ಆತನನ್ನು ನಿಜವಾಗಿಯೂ ಒಬ್ಬ ಮನುಷ್ಯನನ್ನಾಗಿ ಮಾಡಿತು. ನಿಜವಾದ ಮನುಷ್ಯರು ತಾವು ಹುಟ್ಟುವ ಮುನ್ನ ಪರಲೋಕದಲ್ಲಿ ಜೀವಿಸಿರುವುದಿಲ್ಲ. ಈ ಮನುಷ್ಯನೂ ಸಹ ಹುಟ್ಟುವ ಮುನ್ನ ಪರಲೋಕದಲ್ಲಿ ಜೀವಿಸಿರಲಿಲ್ಲ. ಆತನ ಅದ್ಭುತವಾದ ಗರ್ಭದಾರಣೆ ಹಾಗೂ ಜನನವೇ ಒಬ್ಬ ವ್ಯಕ್ತಿಯಾಗಿ ಆತನ ಅಸ್ತಿತ್ವದ ಪ್ರಾರಂಭವಾಗಿದೆ.

ಮಾನವ ಪ್ರಕೃತಿಯು ಬಲಹೀನವಾದುದು ಮತ್ತು ಶೋಧನೆಗಳಿಂದ ಕೂಡಿದೆ. ಮುಂದೆ ನಾವು ನೋಡುವಂತೆ, ಯೇಸುವು ಮಾನವ ಸಹಜ ಬಲಹೀನತೆಯನ್ನು ತನ್ನ ತಾಯಿಯಿಂದ ಪಾರಂಪರ್ಯವಾಗಿ ಹೊಂದಿದ್ದನು. ಆದರೆ ಅದು ಅರ್ಧ ಕಥೆ ಮಾತ್ರ ಆಗಿದೆ. ಯೇಸುವು ದೇವರ ಮಗನೂ ಸಹ ಆಗುತ್ತಾನೆಂದು ಆ ದೂತನು ಮರಿಯಳಿಗೆ ಸ್ಪಷ್ಟಪಡಿಸಿದ್ದನು. "ಪರಾತ್ಪರನ ಶಕ್ತಿಯ ನೆರಳು ನಿನ್ನ ಮೇಲೆ ಬೀಳುವದು; ಆದ್ದರಿಂದ ಹುಟ್ಟುವ ಆ ಪವಿತ್ರ ಶಿಶು ದೇವರ ಮಗನೆನಿಸಿಕೊಳ್ಳುವದು". (ಲೂಕ 1:35).

ಯೇಸುವು ತನ್ನ ತಂದೆಯಿಂದ ಅನೇಕ ವಿಷಯಗಳನ್ನು ಪಾರಂಪರ್ಯವಾಗಿ ಪಡೆದಿದ್ದನು. ದೇವರು ಆತನ ತಂದೆಯಾಗಿದ್ದನು. ಯಾವುದು ಒಳ್ಳೇದೋ ಅದನ್ನು ಯಾವಾಗಲೂ ಮಾಡಬೇಕೆಂಬ ಆಕಾಂಕ್ಷೆಯನ್ನು ಆತನು ದೇವರಿಂದ ಪಡೆದಿದ್ದನು. ತನ್ನ ಮಾನವಸಹಜ ಬಲಹೀನತೆಯನ್ನು ಶೋಧನೆಗಳನ್ನು ಎದುರಿಸಿ, ಅದನ್ನು ಜಯಿಸಲು ಇದೇ ಆತನಿಗೆ ಸಹಾಯ ಮಾಡಿದ್ದು.

## ಯೇಸುವಿನ ಬಾಲ್ಯ

ಯೇಸುವಿನ ಬಾಲ್ಯದ ಬಗ್ಗೆ ನಮಗೆ ಹೆಚ್ಚಾಗಿ ತಿಳಿಸಿಲ್ಲ. ನಮಗೆ ತಿಳಿಸಿರುವ ಒಂದು ವಿಷಯ ಮಾತ್ರ ಬಹಳ ಪ್ರಾಮುಖ್ಯವಾದುದು. ಆತನು ಬೆಳೆದ ರೀತಿಯನ್ನು ಲೂಕನು ಹೀಗೆ ವಿವರಿಸುತ್ತಾನೆ :

"ಯೇಸು ಜ್ಞಾನದಲ್ಲಿಯೂ ದೇಹಬಲದಲ್ಲಿಯೂ ವೃದ್ಧಿಯಾಗುತ್ತಾ ಬಂದನು; ಇದಲ್ಲದೆ ದೇವರ ಮತ್ತು ಮನುಷ್ಯರ ದಯೆಯು ಆತನ ಮೇಲೆ ಹೆಚ್ಚಾಗುತ್ತಾ ಬಂತು." (ಲೂಕ 2:52)

ಯೇಸುವು ವಾಸ್ತವವಾಗಿ ದೇವರಾಗಿದ್ದಾನೆಂದು ನಂಬುವವರಿಗೆ ಈ ವಚನವು ದಿಗ್ಭ್ರಮೆಗೊಳಿಸಬಹುದು. ದೇವರು ಹೇಗೆ ತಾನೇ ಜ್ಞಾನದಲ್ಲಿ ವೃದ್ಧಿಯಾಗಿ, ತನ್ನ ದಯೆಯೇ ತನ್ನ ಮೇಲೆ ಹೇಗೆ ಹೆಚ್ಚಾಗಬಹುದು? ಅಂತಹ ಕಲ್ಪನೆಯೇ ಅಸಂಬದ್ಧವಾದುದು. ಯೇಸುವು 'ಸ್ವಲ್ಪ ಅವಧಿಗೆ ಒಬ್ಬ ಬಾಲಕನ ಶರೀರದಲ್ಲಿ ವಾಸಿಸುವ ದೇವರೆಂದು, ಲೂಕನು ಎಂದಿಗೂ ನಂಬಿರಲಿಲ್ಲವೆಂಬುದು ಸ್ಪಷ್ಟವಾಗಿದೆ.

ಯೇಸುವಿನ ಬಗ್ಗೆ ಮತ್ತೊಂದು ಕಲ್ಪನೆಯ ವಿಷಯದಲ್ಲಿ ಏನು ಹೇಳುವಿರಿ? ಆತನು ಪರಲೋಕದಲ್ಲಿ ಒಬ್ಬ ಬಲಿಷ್ಠ ದೇವದೂತನಾಗಿದ್ದು, ಬೆಳೆಯುತ್ತಿರುವ ಈ ಬಾಲಕನ ಶರೀರದಲ್ಲಿ ವಾಸಿಸುತ್ತಿದ್ದನೆಂದು ಅನೇಕರ ಕಲ್ಪನೆಯಿದೆ. ಇದು ಅದಕ್ಕಿಂತ ಉತ್ತಮವಾದುದಲ್ಲ. ಭೂಲೋಕಕ್ಕೆ ಬರುವ ಮುನ್ನ ಅಂತಹ ದೂತನೊಬ್ಬನು ನಿಶ್ಚಯವಾಗಿಯೂ ಪರಿಪೂರ್ಣ (Perfect)ನಾಗಿರಬೇಕು. ಒಬ್ಬ ಬಾಲಕನ ಶರೀರದಲ್ಲಿರುವ ಒಬ್ಬ ದೇವದೂತನು ಜ್ಞಾನದಲ್ಲಿಯೂ....ವೃದ್ಧಿಯಾಗುತ್ತಾ ಬಂದನು....ದೇವರ ದಯೆಯು ಆತನ ಮೇಲೆ ಹೆಚ್ಚಾಗುತ್ತಾ ಬಂತು" ಎಂಬುದು ಸಾಧ್ಯವಿಲ್ಲ. ಈ ವಚನವು ಒಬ್ಬ ನಿಜವಾದ ಬಾಲಕನ ಬೆಳವಣಿಗೆಯನ್ನು ವಿವರಿಸುತ್ತದೆ. ಅವನ ಶರೀರವು ಬೆಳೆಯಿತು. ಅವನಲ್ಲಿದ್ದ ಜ್ಞಾನವು ಕ್ರಮೇಣ ವಿಕಾಸಗೊಂಡಿತು ಅವನ ಗುಣಗಳು ತುಂಬಾ ಚೆನ್ನಾಗಿ ಪ್ರವರ್ಧಮಾನಕ್ಕೆ ಬರುತ್ತಿದ್ದಂತೆಯೇ ಅವನ ತಂದೆಯು ಅವನನ್ನು ಹೆಚ್ಚು ಹೆಚ್ಚಾಗಿ ಪ್ರೀತಿಸುತ್ತಿದ್ದನು.

## ಶೋಧನೆಯ ಮೇಲೆ ಜಯ

ಕರ್ತನಾದ ಯೇಸುವು ಮಾನವ ಶೋಧನೆಗಳ ವಿರುದ್ಧ ಒಂದು ದೊಡ್ಡ ಹೋರಾಟ ಮಾಡುತ್ತಿದ್ದುದಾಗಿ ಸತ್ಯವೇದವು ವಿವರಿಸುತ್ತದೆ. ಆತನು ಪ್ರತಿನಿತ್ಯವೂ ಶೋಧನೆಯೊಂದಿಗೆ ಹೋರಾಟ ಮಾಡಿದನು. ಮತ್ತು ಪ್ರತಿಸಾರಿಯೂ ಜಯ ಹೊಂದಿದನು. ಶೋಧನೆ ಎಂದರೇನು ಎಂಬುದು ನಮ್ಮೆಲ್ಲರಿಗೂ ಗೊತ್ತಿದೆ. ಯೇಸುವು ನಿಜವಾಗಿಯೂ ಒಬ್ಬ ಮಾನವನಾಗಿದ್ದಲ್ಲಿ ಅವನು ಎಂತಹ ಹೋರಾಟ ಮಾಡಿದನೆಂದು ನಾವು ತಿಳಿಯಬಹುದಾಗಿದೆ. ಯೇಸುವು ಪರಲೋಕದ ಒಬ್ಬ ವ್ಯಕ್ತಿಯಾಗಿದ್ದು ಮಾನವ ಶರೀರಧಾರಿಯಾಗಿದ್ದಲ್ಲಿ ಅದು ಎಂದಿಗೂ ಹೋರಾಟವೇ ಅಲ್ಲ–ಕೇವಲ ಒಂದು ನಟನೆ ಆಗುತ್ತದೆ. ಯಾಕೆಂದರೆ ದೇವರಾಗಲೀ ಇಲ್ಲವೇ ಒಬ್ಬ ದೇವದೂತನಾಗಲೀ ನಮ್ಮ ಹಾಗೆ ಶೋಧಿಸಲ್ಪಡುವ ಸಾಧ್ಯತೆಯೇ ಇಲ್ಲ. ಸತ್ಯವೇದವು "ದೇವರು

ಕೆಟ್ಟದ್ದರಿಂದ ಶೋಧಿಸಲ್ಪಡದವನು" ಎಂದು ಹೇಳುತ್ತದೆ. (ಯಾಕೋಬ 1:13 ಹಳೇ ಭಾಷಾಂತರ) ಆದರೂ ಸಹ ಯೇಸುವಿನ ಬಗ್ಗೆ ನಮಗೆ ಹೀಗೆ ತಿಳಿಸಲ್ಪಟ್ಟಿದೆ. "ಯಾಕೆಂದರೆ ನಮಗಿರುವ ಮಹಾಯಾಜಕನು ನಮ್ಮ ನಿರ್ಬಲಾವಸ್ಥೆಯನ್ನು ಕುರಿತು ಅನುತಾಪವಿಲ್ಲದವನಲ್ಲ. ಆತನು ಸರ್ವವಿಷಯಗಳಲ್ಲಿ ನಮ್ಮ ಹಾಗೆ ಶೋಧನೆಗೆ ಗುರಿಯಾದನು ಪಾಪ ಮಾತ್ರ ಮಾಡಲಿಲ್ಲ." (ಇಬ್ರಿಯ 4:15)

ಒಮ್ಮೆ ಯೇಸು ಶೋಧನೆಯ ವಿರುದ್ಧ ಹೋರಾಡುತ್ತಿದ್ದಾಗ "ಹೇಗೂ ನನ್ನ ಚಿತ್ತವಲ್ಲ; ನಿನ್ನ ಚಿತ್ತವೇ ಆಗಲಿ" ಎಂದು ದೇವರಿಗೆ ಹೇಳಿದನು. (ಲೂಕ 22:42) ಇದಕ್ಕೆ ಸಾಕ್ಷ್ಯವಾಗಿ ಯೇಸುವು ತನ್ನದೇ ಸ್ವಂತ ಚಿತ್ತವನ್ನು ಹೊಂದಿದ್ದು, ಅದನ್ನು ನಾಶಪಡಿಸಬೇಕಿತ್ತು, ಯಾಕೆಂದರೆ ಅದರ ಬದಲಿಗೆ ದೇವರ ಚಿತ್ತವು ನೆರವೇರಬೇಕಿತ್ತು. ಆತನು ನಿಜವಾಗಿಯೂ ಒಬ್ಬ ಮಾನವನಾಗಿದ್ದಲ್ಲಿ, ಈ ವಚನವನ್ನು ನಾವು ಗ್ರಹಿಸಬಹುದಾಗಿರುತ್ತೆ. ಆದರೆ ಯೇಸುವು ನಿಜವಾಗಿಯೂ ಮಾನವ ರೂಪಿಯಾದ ಒಬ್ಬ ದೇವರಾಗಲೀ ದೇವದೂತನಾಗಲೀ ಆಗಿದ್ದಲ್ಲಿ, ಇದು ಅರ್ಥವೇ ಕೊಡುವುದಿಲ್ಲ—ಅಸಂಬದ್ಧವಾದುದಾಗಿರುತ್ತೆ.

## ಯೇಸುವು ಹೇಗೆ ಪರಿಪೂರ್ಣ (Perfect)ನಾದನು ?

ಪರಿಪೂರ್ಣನಾದುದಕ್ಕಿಂತ ಕೆಳಮಟ್ಟದಲ್ಲಿ ಏನಾದರೊಂದು ಇರುವುದು ಎರಡು ರೀತಿಯಲ್ಲಿ ಕಾಣಬಹುದು. ಇವೆರಡಕ್ಕೂ ಇರುವ ವ್ಯತ್ಯಾಸವನ್ನು ಮೆಚ್ಚುವುದು ಬಹಳ ಮುಖ್ಯವಾದುದಾಗಿದೆ. ಇನ್ನೇನು ಬಿದ್ದು ಹೋಗುವ ಸ್ಥಿತಿಯಲ್ಲಿರುವ ಒಂದು ಹಳೇ ಮನೆಯು ಪರಿಪೂರ್ಣವಾದುದಲ್ಲ. ಯಾಕೆಂದರೆ ಅದು ನಾಶವಾಗುವ ಸ್ಥಿತಿಯಲ್ಲಿದೆ. ಅದರಲ್ಲಿ ಬೇಕಾದಷ್ಟು ದೋಷಗಳಿವೆ.

ಅರ್ಧಂಬರ್ಧ ಕಟ್ಟಿದ ಹೊಸ ಮನೆಯೂ ಸಹ ಪರಿಪೂರ್ಣವಾದುದಲ್ಲ. ಆದರೆ ಇಲ್ಲಿ ಭಿನ್ನ ರೀತಿಯ ಅಪರಿಪೂರ್ಣತೆ ಇದೆ. ಅರ್ಧಂಬರ್ಧ ಕಟ್ಟಿದ ಈ ಮನೆಯಲ್ಲಿ ದೋಷವೇನೂ ಇಲ್ಲ. ಕಟ್ಟಿರುವಷ್ಟೆ ಅದು ಚೆನ್ನಾಗಿದೆ ಆದರೆ ಅದು ಇನ್ನೂ ಪೂರ್ಣಗೊಂಡಿಲ್ಲ.

ಯೇಸುವು ಮೊದಲನೇ ಅರ್ಥದಲ್ಲಿ ಎಂದಿಗೂ ಅಪರಿಪೂರ್ಣನಾಗಿರಲಿಲ್ಲ. ಅವನಲ್ಲಿ ಯಾವುದೇ ದೋಷವಿರಲಿಲ್ಲ. ಅವನು ಒಂದು ಸಾರಿಯಾದರೂ ಪಾಪ ಮಾಡಲಿಲ್ಲ. ಆದರೂ ಸಹ, ಅವನ ಗುಣಗಳು ಕ್ರಮೇಣ ವೃದ್ಧಿಯಾಗಬೇಕಿತ್ತು; ಪೂರ್ಣವಾಗುವತನಕ ಒಂದು ಮನೆಯನ್ನು ಕಟ್ಟುವ ಹಾಗೆ. ಈ ವಚನಗಳು ತಿಳಿಸುವಂತೆ, ಈ ಅರ್ಥದಲ್ಲಿ ಆತನು ಪರಿಪೂರ್ಣನಾಗಬೇಕಿತ್ತು :

"ಹೀಗೆ ಆತನು ಮಗನಾಗಿದ್ದರೂ ಅನುಭವಿಸಿದ ಬಾಧೆಗಳಿಂದಲೇ ವಿಧೇಯತೆಯನ್ನು ಕಲಿತುಕೊಂಡನು. ಇದಲ್ಲದೆ ಆತನು ಸಿದ್ಧಿಗೆ ಬಂದು (Made perfect)....ತನಗೆ ವಿಧೇಯರಾಗಿರುವವರೆಲ್ಲರಿಗೂ ನಿರಂತರವಾದ ರಕ್ಷಣೆಗೆ ಕಾರಣನಾದನು." (ಇಬ್ರಿಯ 5:8-9)

"ಸಮಸ್ತರೂ ಯಾವನಿಗೋಸ್ಕರವೂ ಯಾವನಿಂದಲೂ ಉಂಟಾಯಿತೋ ಆತನು (ದೇವರು) ಬಹುಮಂದಿ ಪುತ್ರರನ್ನು ಪ್ರಭಾವಕ್ಕೆ ಸೇರಿಸುವಲ್ಲಿ ಅವರ ರಕ್ಷಣಾಕರ್ತನನ್ನು ಬಾಧೆಗಳ ಮೂಲಕ ಸಿದ್ಧಿಗೆ ತರುವುದು ಆತನಿಗೆ ಯುಕ್ತವಾಗಿತ್ತು." (ಇಬ್ರಿಯ 2:10)

ಯೇಸುವು ಒಬ್ಬ ದೈವೀಕ ವ್ಯಕ್ತಿಯಾಗಿದ್ದು ಮಾನವಶರೀರಧಾರಿಯಾಗಿದ್ದನು ಎಂಬ ಜನಸಾಮಾನ್ಯರ ಕಲ್ಪನೆಯು ತಪ್ಪಾಗಿದೆ ಎಂಬುದು ಮತ್ತೆ ಸ್ಪಷ್ಟವಾಗಿದೆ. ಅಂತಹ ಒಬ್ಬ ದೈವೀಕ ವ್ಯಕ್ತಿಯು, "ತಾನು ಅನುಭವಿಸುವ ಬಾಧೆಗಳಿಂದಲೇ ವಿಧೇಯತೆಯನ್ನು ಕಲಿತುಕೊಂಡನು" ಎಂಬುದನ್ನು ಊಹಿಸಬಲ್ಲಿರಾ? ಅಂತಹ ಒಬ್ಬ ದೈವೀಕ ವ್ಯಕ್ತಿಯು ಬಾಧೆಗಳಿಂದಲೇ ಸಿದ್ಧಿಗೆ (Perfect) ಬರುತ್ತಾನೆಂಬುದನ್ನು ಕಲ್ಪಿಸಿಕೊಳ್ಳಲು ಸಾಧ್ಯವೇ ?

ಎಂದಿಗೂ ಇಲ್ಲ! ಇಲ್ಲಿ ಒಬ್ಬ ನಿಜವಾದ ಮಾನವನು ಪರಿಪೂರ್ಣ ಗುಣಗಳನ್ನು ಒಂದರ ಮೇಲೆ ಮತ್ತೊಂದನ್ನು ವರಸೆಯಾಗಿ ಇಡುವಂತೆ, ಬೆಳೆಸುತ್ತಾ ಬರುವುದನ್ನು ಕಾಣುತ್ತೇವೆ. ಯೇಸುವು ದೇವರೇ ತಾನಾಗಿದ್ದಲ್ಲಿ, ಇಲ್ಲವೇ ಒಬ್ಬ ಮಹಾ ದೇವದೂತನಾಗಿದ್ದಲ್ಲಿ, ಈ ಲೋಕಕ್ಕೆ ಬರುವ ಬಹಳ ಕಾಲದ ಹಿಂದೆಯೇ ಆತನು ಪರಿಪೂರ್ಣನಾಗಬೇಕಿತ್ತು. ಆದರೆ ಇದು ಆಗಿರಲಿಲ್ಲ. ಯೇಸುವು ತಾನು ಈ ಲೋಕದಲ್ಲಿ ಅನುಭವಿಸಿದ ಬಾಧೆಗಳಿಂದ ಮಾತ್ರವೇ ಪರಿಪೂರ್ಣನಾದನು ಎಂದು ನಮಗೆ ತಿಳಿಸಲ್ಪಟ್ಟಿದೆ.

(ಮುಂದುವರೆಯುವುದು) —ಭಾ. ಚಂದುದಾಸ್

# ಸತ್ಯವೇದದ ಮೂಲ ತತ್ವಗಳು-3

II ದೇವರು ತನ್ನನ್ನು ಪ್ರಕಟಿಸಿಕೊಳ್ಳುವುದು (ಆ) (ಹಿಂದಿನ ಸಂಚಿಕೆಯಿಂದ)

**4. ನಾವೂ ಸಹ ದೇವರ ಹೆಸರನ್ನು ಧರಿಸಬಹುದು**

ಅ ಕ 15:14–ದೇವರು ಮೊದಲಲ್ಲಿ ಅನ್ಯಜನರನ್ನು ಕಟಾಕ್ಷಿಸಿ ನೋಡಿ ತನ್ನ ಹೆಸರಿಗಾಗಿ ಅವರೊಳಗಿಂದ ಒಂದು ಪ್ರಜೆಯನ್ನು ಆರಿಸಿಕೊಂಡ ವಿಧವನ್ನು ಸಿಮೆಯೋನನು ವಿವರಿಸಿದನಷ್ಟೆ." ಅನ್ಯಜನರು ಲೌಕಿಕ ಮಾರ್ಗದಿಂದ ದೇವರ ಮಾರ್ಗಕ್ಕೆ ತಿರುಗಿಕೊಳ್ಳುತ್ತಿದ್ದರು. ಅವರು ದೇವರ ಗುಣಲಕ್ಷಣಗಳನ್ನು ಪ್ರಕಟಗೊಳಿಸುತ್ತಿದ್ದರು. ಆದ್ದರಿಂದ ಅವರು ಆತನ ಹೆಸರನ್ನು ಧರಿಸಿದವರಾಗಿದ್ದರು.

ಪ್ರಕಟನೆ 14:1: 1,44,000 ವಿಮೋಚಿಸಲ್ಪಟ್ಟವರನ್ನು ಪ್ರತಿನಿಧಿಸುವ ಒಂದು ಸಂಖ್ಯೆ–ಆತ್ಮೀಕ ಇಸ್ರಾಯೇಲ್ ವಿಮೋಚಿಸಲ್ಪಟ್ಟನಂತರ ಅವರು ದೇವರ ಮಾನಸಿಕ, ನೈತಿಕ ಹಾಗೂ ಭೌತಿಕ ಮಹಿಮೆಯನ್ನು ಪ್ರತಿಬಿಂಬಿಸುವವರಾಗಿದ್ದಾರೆ. ಆದ್ದರಿಂದ ಅವರು ದೇವರಲ್ಲಿ "ಒಂದಾಗಿ" ಪ್ರತಿಯೊಂದು ರೀತಿಯಲ್ಲಿಯೂ ಆತನ ಹೆಸರನ್ನು ಧರಿಸಿದವರಾಗಿ, ದೇವರನ್ನು ಪೂರ್ಣವಾಗಿ ಪ್ರಕಟಗೊಳಿಸುವವರಾಗಿದ್ದಾರೆ. (7:9, 13-14ನ್ನೂ ನೋಡಿ). ಮತ್ತಾಯ 28:19; 1 ಥೆಸಲೋನಿಕ 1:1; ಅ.ಕೃ. 2:38.

ಯೋಹಾನ 17:21-22: "ತಂದೆಯೇ ನೀನು ನನ್ನಲ್ಲಿಯೂ, ನಾನು ನಿನ್ನಲ್ಲಿಯೂ ಇರುವ ಪ್ರಕಾರ ಅವರೂ ನಮ್ಮಲ್ಲಿ ಇರಬೇಕೆಂತಲೂ ಕೇಳಿಕೊಳ್ಳುತ್ತೇನೆ." ಯೇಸುವು ದೇವರೊಂದಿಗೆ ಒಂದಾಗಿರುವಂತೆ ನಾವೂ ಸಹ ಆತನಲ್ಲಿ ಒಂದಾಗಿರಬೇಕೆಂದು ಪ್ರಾರ್ಥಿಸುತ್ತಾನೆ. ದೇವರ ವಾಕ್ಯವು ಹೇಗೆ ಕ್ರಿಸ್ತನಿಗೆ ಈ ಏಕತೆ ತಂದಿತೋ, ಅದೇ ರೀತಿಯಲ್ಲಿ ದೇವರ ವಾಕ್ಯವು ನಮ್ಮಲ್ಲಿ ನೆಲೆಗೊಂಡಿದ್ದರೆ ಇದು ಸಾಧ್ಯವಾಗುತ್ತದೆ. ದೇವರು, ತಾನು ಮತ್ತು ತನ್ನ ಸೇವಕರು ಎಲ್ಲರೂ ಒಂದೇ ಕುಟುಂಬದ (ದೇವರ) ಗುಣ ಲಕ್ಷಣಗಳನ್ನು ಹೊಂದಿರಬೇಕೆಂದು ಯೇಸುವು ಅಪೇಕ್ಷಿಸಿದ್ದನು. ವ-22. "ನಾವು ಒಂದಾಗಿರುವ ಪ್ರಕಾರ ಅವರೂ ಒಂದಾಗಿರಬೇಕೆಂದು ನೀನು ನನಗೆ ಕೊಟ್ಟಿರುವ ಮಹಿಮೆಯನ್ನು ನಾನು ಅವರಿಗೆ ಕೊಟ್ಟಿದ್ದೇನೆ" ಈ ಏಕತೆಯನ್ನು ಮುಟ್ಟಬೇಕಾದಲ್ಲಿ ಆತನ ಮಹಿಮೆಯಿಂದ ಮಾತ್ರವೇ ಸಾಧ್ಯ. (ಯೇಸುವು ಪ್ರಕಟಗೊಳಿಸಿದ ನೈತಿಕ ಉತ್ಕೃಷ್ಟತೆ). ಅದರಂತೆ ನಾವು ನಡೆದಲ್ಲಿ ನಾವೂ ಸಹ ದೇವರನ್ನು ಪ್ರಕಟಗೊಳಿಸಬಹುದಾಗಿದೆ.

III ಯೇಸುಕ್ರಿಸ್ತನು : ಅಂದರೆ ತಾನು "ಅಭಿಷೇಕಿಸಲ್ಪಟ್ಟ ಒಬ್ಬ"ನಿಂದ "ದೇವರು ರಕ್ಷಿಸುತ್ತಾನೆ" ಎಂದರ್ಥ. (ಮತ್ತಾಯ 1:12)

(1) ಯೇಸುಕ್ರಿಸ್ತನು "ಮನುಷ್ಯ ಕುಮಾರನು" ಯಾಕೆಂದರೆ ಆತನು ಸ್ತ್ರೀಯಲ್ಲಿ ಹುಟ್ಟಿದವನಾಗಿದ್ದಾನೆ. ಆದ್ದರಿಂದ ಮಾನವನ ಎಲ್ಲಾ ಆಕಾಂಕ್ಷೆಗಳನ್ನು ಅನುಭವಗಳನ್ನು ಹಾಗೂ ಕೊರತೆಗಳನ್ನು ಪಾರಂಪರ್ಯವಾಗಿ ಹೊಂದಿದ್ದನು. "ಆದರೆ ಕಾಲವು ಪರಿಪೂರ್ಣವಾದಾಗ ದೇವರು ತನ್ನ ಮಗನನ್ನು ಕಳುಹಿಸಿಕೊಟ್ಟನು. ಧರ್ಮಶಾಸ್ತ್ರಾಧೀನರಾದವರನ್ನು ವಿಮೋಚಿಸಬೇಕೆಂತಲೂ ಪುತ್ರರ ಪದವಿಯನ್ನು ನಮಗೆ ದೊರಕಿಸಬೇಕೆಂತಲೂ ಆತನು ಸ್ತ್ರೀಯಲ್ಲಿ ಹುಟ್ಟಿದವನಾಗಿಯೂ ಧರ್ಮ ಶಾಸ್ತ್ರಾಧೀನನಾಗಿಯೂ ಬಂದನು." (ಗಲಾತ್ಯ 4:4-5). ವಿಮೋಚನೆ ಮಾಡಲೆಂದು ದೇವರು ತನ್ನ ಮಗನನ್ನು ಕಳುಹಿಸಿಕೊಟ್ಟನು. ಅದನ್ನು ನೆರವೇರಿಸಲು ಯೇಸುವು "ಸ್ತ್ರೀಯಲ್ಲಿ ಹುಟ್ಟಿದವನಾಗ"ಬೇಕಾಯಿತು, ಅಂದರೆ ರಕ್ತ ಮಾಂಸದಲ್ಲಿ ಹುಟ್ಟಿದನು "ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ; ಆತನು ಮನುಷ್ಯನಾಗಿರುವ ಕ್ರಿಸ್ತಯೇಸುವೇ." (1 ತಿಮೋಥೆ 2:5). ಯೇಸುವು ದೇವರಿಗೂ ಮನುಷ್ಯರಿಗೂ ಮಧ್ಯಸ್ಥನಾಗಿದ್ದಾನೆ. ಯೇಸುವು ತಂದೆಯ ಬಲಪಾರ್ಶ್ವಕ್ಕೆ ಏರಿಹೋದನಂತರವೂ ನಿತ್ಯಜೀವವನ್ನು ಪಡೆದನಂತರವೂ, "ಮನುಷ್ಯ"ನೆಂದೇ ವಿವರಿಸಿದೆ; ಯಾಕೆಂದರೆ ಆತನು ಮಾನವನಾಗಿ ಹುಟ್ಟಿದನು. "ನಜರೇತಿನ ಯೇಸು ಇದ್ದನಲ್ಲಾ, ದೇವರು ನಿಮಗೂ ತಿಳಿದಿರುವಂತೆ ಆತನ ಕೈಯಿಂದ ಮಹತ್ತುಗಳನ್ನೂ ಅದ್ಭುತಗಳನ್ನೂ ಸೂಚಕ ಕಾರ್ಯಗಳನ್ನೂ ನಿಮ್ಮಲ್ಲಿ ನಡೆಸಿ ಆತನನ್ನು ತನಗೆ ಮೆಚ್ಚಿಕೆಯಾದವನೆಂದು **(A Man approved of God)** ನಿಮಗೆ ತೋರಿಸಿಕೊಟ್ಟನು" (ಅ.ಕೃ. 2:22). ಅಪೋಲಸ್ತರು ದೇವರಿಗೂ ಯೇಸುವಿಗೂ ವ್ಯತ್ಯಾಸವನ್ನು ಎಷ್ಟು ಸ್ಪಷ್ಟವಾಗಿ ಗುರುತಿಸಿದ್ದಾರೆ—ಯೇಸುವು ದೇವರಿಗೆ ಮೆಚ್ಚಿಕೆಯಾದವನೆಂದೂ ಮತ್ತು ಒಬ್ಬ ಮನುಷ್ಯನೆಂದೂ ವಿವರಿಸಿದ್ದಾರೆ. **(a Man approved of God)** [ಇಬ್ರಿಯ 2:14; 4:15; 5:7-8ನ್ನೂ ಓದಿ].

(2) ಯೇಸುವು "ದೇವರ ಮಗ"ನಾಗಿದ್ದಾನೆ ಯಾಕೆಂದರೆ ದೇವರು ಆತನನ್ನು ತನ್ನ ಶಕ್ತಿಯಿಂದ ಪಡೆದನು.

"ಮರಿಯಳು ಆ ದೂತನನ್ನು—ಇದು ಹೇಗಾದೀತು? ನಾನು ಪುರುಷನನ್ನು ಅರಿತವಳಲ್ಲಾ ಎಂದು ಕೇಳಿದ್ದಕ್ಕೆ ದೂತನು—ನಿನ್ನ ಮೇಲೆ ಪವಿತ್ರಾತ್ಮ ಬರುವದು; ಪರಾತ್ಪರನ ಶಕ್ತಿಯು ನೆರಳು ನಿನ್ನ ಮೇಲೆ ಬೀಳುವದು; ಆದ್ದರಿಂದ ಹುಟ್ಟುವ ಆ ಪವಿತ್ರ ಶಿಶು ದೇವರ ಮಗನೆನಿಸಿಕೊಳ್ಳುವದು." (ಲೂಕ 1:34-35). ಈ ಪ್ರಕರಣದಲ್ಲಿ ಸಹಜ ರೀತಿಯ ಗರ್ಭಧಾರಣೆಯು ಅನ್ವಯವಾಗುವುದಿಲ್ಲ. ಮರಿಯಳ ಪ್ರಶ್ನೆಗೆ ಉತ್ತರ ನೀಡಲಾಗಿದೆ. (ಮತ್ತಾಯ 1:20; ಯೆಶಾಯ 7;14ನ್ನು ಓದಿ).

(3) ದೇವರು ಯೇಸುವನ್ನು ಪವಿತ್ರಾತ್ಮದಿಂದಲೂ ಬಲದಿಂದಲೂ ಅಭಿಷೇಕಿಸಿದನು" ಇದರಿಂದಾಗಿ ಆತನು ದೇವರ ಮಾತುಗಳನ್ನೇ ಆಡಲು ಮತ್ತು ಅದ್ಭುತ ಕಾರ್ಯಗಳನ್ನು ಮಾಡಲು ಸಾಧ್ಯವಾಯಿತು.

**ದೇವರು ನಜರೇತಿನ ಯೇಸುವನ್ನು ಪವಿತ್ರಾತ್ಮದಿಂದಲೂ ಬಲದಿಂದಲೂ ಅಭಿಷೇಕಿಸಿದನು;** ದೇವರು ಆತನ ಸಂಗಡ ಇದ್ದುದರಿಂದ ಆತನು ಉಪಕಾರಗಳನ್ನು ಮಾಡುತ್ತಾ ಸೈತಾನನಿಂದ ಬಾಧಿಸಲ್ಪಡುತ್ತಿರುವವರೆಲ್ಲರನ್ನು ಗುಣ ಮಾಡುತ್ತಾ ಸಂಚರಿಸಿದನು" [ಅ.ಕೃ. 10:38].

ಯೇಸುವು "ಇಮ್ಮಾನುವೇಲ್" ಆಗಿದ್ದನು-ಅದರೆ ದೇವರು ನಮ್ಮ ಕೂಡ ಇದ್ದಾನೆ ಎಂದರ್ಥ; ಯಾಕೆಂದರೆ ಆತನ "ವಿಶೇಷ"ವಾದ ಗರ್ಭದಾರಣೆ ಮತ್ತು ಅಳತೆಯಿಲ್ಲದಂತೆ ಪಡೆದ ಪವಿತ್ರಾತ್ಮ ಶಕ್ತಿಯಿಂದಾಗಿ ಆತನು "ಇಮ್ಮಾನುವೇಲ್" ಆಗಿದ್ದನು.

"ಪವಿತ್ರಾತ್ಮನು ದೇಹಾಕಾರನಾಗಿ ಪಾರಿವಾಳದ ಹಾಗೆ ಆತನ ಮೇಲೆ ಇಳಿದನು. ಆಗ-ನೀನು ಪ್ರಿಯನಾಗಿರುವ ನನ್ನ ಮಗನು, ನಿನ್ನನ್ನು ನಾನು ಮೆಚ್ಚಿದ್ದೇನೆ ಎಂದು ಆಕಾಶವಾಣಿ ಆಯಿತು." [ಲೂಕ 3:22].

ಪರಲೋಕದಿಂದ ಬಂದ ಪಾರಿವಾಳ ಹಾಗೂ ವಾಣಿಯಿಂದ ದೃಶ್ಯವಾಗಿಯೂ ಕಿವಿಗೆ ಕೇಳಿಸುವಂತೆಯೂ ಯೇಸುವಿನ ದೈವೀಕ ಅಂಗೀಕಾರವನ್ನು ನೀಡಲಾಯಿತು. ಇವುಗಳು ಯೇಸುವು ಮೆಸ್ಸೀಯನೆಂದು ಸಾಧಿಸಲು ದೃಢೀಕರಿಸಿದ್ದವು. ಪವಿತ್ರಾತ್ಮ ಶಕ್ತಿಯಿಂದ ಆತನು ನಂತರ ಮಾಡಿದ ಕಾರ್ಯಗಳೂ ಸಹ ಈ ವಾಸ್ತವಿಕತೆಯನ್ನು ದೃಢೀಕರಿಸಿದವು. [ಲೂಕ 4:14, 18, 32, 36 ನ್ನು ಓದಿ].

## III. ಪವಿತ್ರಾತ್ಮ (Holy Spirit)

(1) "ಪವಿತ್ರ" (Holy) ಎಂಬ ಪದಕ್ಕೆ "ಪ್ರತ್ಯೇಕವಾಗಿಡಲ್ಪಟ್ಟದ್ದು", ಪರಿಶುದ್ಧವಾದದ್ದು, ವಿಶೇಷವಾದದ್ದು, ಎಂದರ್ಥ. "ಆತ್ಮ" (Spirit) ಎಂಬುದು ಶಕ್ತಿಯನ್ನು ಸೂಚಿಸುತ್ತದೆ. ಆದ್ದರಿಂದ ಪವಿತ್ರಾತ್ಮವು ದೇವರ ವಿಶೇಷ ಶಕ್ತಿಯಾಗಿದೆ. ಅದು ತಂದೆಯಿಂದ ಬೇರೆಯಾದ [ಪ್ರತ್ಯೇಕವಾದ] ಒಂದು ವೈಯಕ್ತಿಕ ದೇವರಾಗಿಲ್ಲ-ಆದರೆ ದೇವರ ಪ್ರಸರಿಸುವ ಅಗೋಚರ ಶಕ್ತಿಯಾಗಿದೆ. ಹಳೆಯ ಒಡಂಬಡಿಕೆಯಲ್ಲಿ ಉಲ್ಲೇಖಿಸಿರುವ ಶಕ್ತಿಯೇ (Spirit) ಇದಾಗಿದೆ. ಆದರೆ ಇದನ್ನು "ಪವಿತ್ರಾತ್ಮ" (Holy Spirit) ಎಂದು ಕರೆಯಲಾಗಿದೆ.

ದೈವೀಕ ವರಗಳಾಗಿ ದೈವೀಕ ಚಿತ್ತದಂತೆ ನೀಡಲ್ಪಟ್ಟ ಶಕ್ತಿಯೇ ಇದಾಗಿದೆ. ಇದರಿಂದಾಗಿ ನಿರ್ದಿಷ್ಟ ದೈವೀಕ ಫಲಿತಾಂಶವನ್ನು-ಅದ್ಭುತ ಕಾರ್ಯಗಳನ್ನು ಮಾಡಲು ಸಾಧ್ಯವಾಗುತ್ತು [ಅ.ಕ. 2:22]; ಪ್ರೇರಣೆ [2 ಪೇತ್ರ 1:20-21]. ಹೀಗೆ ಪವಿತ್ರಾತ್ಮವು ದೇವರ ವಿಶೇಷ ಶಕ್ತಿಯಾಗಿದೆ.

"ಆದರೆ ಪವಿತ್ರಾತ್ಮ ಬರಲು ನೀವು ಬಲವನ್ನು ಹೊಂದಿ ಯೆರೂಸಲೇಮಿ ನಲ್ಲಿಯೂ ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟಕಡೆಯುವರೆಗೂ ನನಗೆ ಸಾಕ್ಷಿಗಳಾಗಿರಬೇಕು ಅಂದನು." [ಅ.ಕ. 1:8].

"ಇಗೋ, ನನ್ನ ತಂದೆಯು ವಾಗ್ದಾನ ಮಾಡಿದ್ದನ್ನು ನಿಮಗೆ ಕಳುಹಿಸಿಕೊಡು ತ್ತೇನೆ. ದೇವರು ಮೇಲಣ ಲೋಕದಿಂದ ನಿಮಗೆ ಶಕ್ತಿಯನ್ನು ಹೊಂದಿಸುವತನಕ ಈ ಪಟ್ಟಣದಲ್ಲೇ ಕೂಡಿರ್ರಿ ಎಂದು ಹೇಳಿದನು" [ಲೂಕ 24:49].

ಪವಿತ್ರಾತ್ಮದ ಸುರಿಸುವಿಕೆಯನ್ನು ಇಲ್ಲಿ ಉಲ್ಲೇಖಿಸಿದೆ. [ಅ.ಕ. 2:2-4]. ಇದನ್ನು ಮೇಲಣ ಲೋಕದಿಂದ ಎಂದು ತಿಳಿಸಿದ್ದು, ಅದು ವಿಶೇಷವಾದ ಶಕ್ತಿಯೆಂದು ತೋರಿಸುತ್ತದೆಯೇ ಹೊರತು, ಒಂದು ಪ್ರತ್ಯೇಕವಾದ ವ್ಯಕ್ತಿಯೆಂದಲ್ಲ.

"ಮರಿಯಳು ಆ ದೂತನನ್ನು—ಇದು ಹೇಗಾದೀತು? ನಾನು ಪುರುಷ ನನ್ನು ಅರಿತವಳಲ್ಲವಲ್ಲಾ ಎಂದು ಕೇಳಿದ್ದಕ್ಕೆ ದೂತನು—ನಿನ್ನ ಮೇಲೆ ಪವಿತ್ರಾತ್ಮ ಬರುವುದು; ಪರಾತ್ಪರನ ಶಕ್ತಿಯು ನೆರಳು ನಿನ್ನ ಮೇಲೆ ಬೀಳುವುದು; ಆದ್ದರಿಂದ ಹುಟ್ಟುವ ಆ ಪವಿತ್ರ ಶಿಶು ದೇವರ ಮಗನೆನಿಸಿಕೊಳ್ಳು ವದು." [ಲೂಕ 1:34-35] ಇಲ್ಲಿ ಪವಿತ್ರಾತ್ಮ ಎಂಬುದನ್ನು ಪರಾತ್ಪರನ ಶಕ್ತಿ ಯೆಂದು ತಿಳಿಸಿದೆ. ದೇವರಿಗೂ, ಯೇಸುವಿಗೂ ಪವಿತ್ರಾತ್ಮನಿಗೂ ಇರುವ ನಿಜವಾದ ಸಂಬಂಧವನ್ನು ಈ ಒಂದು ವಚನವು ಸ್ಪಷ್ಟೀಕರಿಸುತ್ತದೆ.

"ದೇವರು ನಜರೇತಿನ ಯೇಸುವನ್ನು ಪವಿತ್ರಾತ್ಮದಿಂದಲೂ ಬಲದಿಂದಲೂ ಅಭಿಷೇಕಿಸಿದನು. ದೇವರು ಆತನ ಸಂಗಡ ಇದ್ದುದರಿಂದ....(ಅ.ಕೃ. 10:38]

ದೇವರಿಗೂ, ಯೇಸುವಿಗೂ, ಪವಿತ್ರಾತ್ಮಕ್ಕೂ ಇರುವ ಸಂಬಂಧವನ್ನು ಮತ್ತೆ ಈ ವಚನದಲ್ಲಿ ಸ್ಪಷ್ಟವಾಗಿ ಕಾಣುತ್ತದೆ ಜನಸಾಮಾನ್ಯರ ನಂಬಿಕೆಯಂತೆ "ತ್ರಯೈಕತ್ವ"ದ ನಂಬಿಕೆಗೆ ಇಲ್ಲಿ ಎಳ್ಳಷ್ಟೂ ಎಡೆಯಿಲ್ಲ. ಈ ಮೂವರು ವ್ಯಕ್ತಿ ಗಳಾಗಿದ್ದಲ್ಲಿ [ಸಾಮಾನ್ಯ ನಂಬಿಕೆಯಂತೆ] ಒಬ್ಬ ವ್ಯಕ್ತಿಯು ಮತ್ತೊಬ್ಬ ವ್ಯಕ್ತಿ ಯನ್ನು ಮೂರನೇ ವ್ಯಕ್ತಿಯಿಂದ ಅಭಿಷೇಕಿಸಲು ಹೇಗೆತಾನೇ ಸಾಧ್ಯ? ಪವಿತ್ರಾತ್ಮ ನನ್ನು "ಶಕ್ತಿ"ಗೆ ಹೋಲಿಸಿರುವುದನ್ನು ಗಮನಿಸಿ.

(ಮುಂದವರೆಯುವುದು)